# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಎಸ್.ಟಿ.ಗಡ್ಡದ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಚಿಕ್ಕೋಣತಿ ಗ್ರಾಮ ಪಂಚಾಯತಿ, ಹಿರೆಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 147 ಗ್ರಾಪಂಕಾ 2015, ದಿನಾಂಕ 25.04.2015
2) ಮಾನ್ಯ ಉಪಲೋಕಾಯುಕ್ತ ರವರ ವರದಿ ಸಂಖ್ಯೆ: UPLOK-1/DE/250/2015/ARE-9, ದಿನಾಂಕ: 17.04.2017
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 16.05.2017
4) ಶ್ರೀ ಎಸ್.ಟಿ.ಗಡ್ಡದ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಚಿಕ್ಕೋಣತಿ ಗ್ರಾಮ ಪಂಚಾಯತಿ, ಹಿರೆಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ, ದಿ.23.06.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಶ್ರೀ ಎಸ್.ಟಿ.ಗಡ್ಡದ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಚಿಕ್ಕೋಣತಿ ಗ್ರಾಮ ಪಂಚಾಯತಿ, ಹಿರೆಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರು 2006-07 ನೇ ಸಾಲಿನಲ್ಲಿ ಜಲ ರಕ್ಷಣ ಯೋಜನೆ ಅಡಿಯಲ್ಲಿ ಎಸಗಿರುವ ಅವ್ಯವಹಾರದ ಸಂಬಂಧ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಕೆಯಾಗಿರುವ ದೂರಿನ ಕುರಿತು ವಿಚಾರಣೆ ನಡೆಸಲು ಸರ್ಕಾರದಿಂದ ದಿನಾಂಕ 25.04.2015 ರ ಸರ್ಕಾರದ ಆದೇಶದಲ್ಲಿ ಕ.ನಾ.ಸೇ.ನಿ.1957 ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಸದರಿ ಪ್ರಕರಣದ ಕುರಿತು ವಿಚಾರಣೆ ನಡೆಸಲಾಗಿ, ಕೆಳಕಂಡ ಆರೋಪಗಳು ಸಾಬೀತಾಗಿರುತ್ತವೆಂದು ಮಾನ್ಯ ಉಪಲೋಕಾಯುಕ್ತ ವರದಿಯಲ್ಲಿ ಕೆಳಗಿನಂತೆ ತಿಳಿಸಿರುತ್ತಾರೆ.

"The DGO Sri S.T. Gaddad, while working as secretary, Chikkonati Grama Panchayath, Hirekerur Taluk, Haveri dist. During the year 2006-07;

1. Had not properly maintained cash book and register of distribution of rice under 'Jala Rakshana Scheme'.
2. Had not obtained signatures of the beneficiaries by name Smt. Kamalavva Mudagad, Sri Chandrappa Sommanavar, Sri Shambanagowda Patil, Sri Erappa Mudigoudar, Sri Fakirappa Karekannappanavar, Sri Hoovappa Kavali and Sri Lingappa Choulger in the rice distribution register.
3. Had written names of 30 beneficiaries twice in the rice distribution register and had mentioned payment of Rs.4800/- against the names of said 30 beneficiaries written for the 2nd time but had not obtained their signatures.
4. Had not paid the amount and 8 quintal of rice to the said beneficiaries under 'Jala Rakshana Scheme'.
5. Had made payment towards construction of houses under ashraya scheme to Smt. Yashoda Kansogi, Smt Sulochana Hiremath and Smt Kamalavva Somannavar though they had not constructed houses;

Thereby the DGO has failed to maintain absolute integrity and devotion to duty and committed an act which is unbecoming of a government servant and guilty of misconduct under rule 3(1)(i) to(iii) of KCS(conduct) rules, 1966"

ಮುಂದುವರೆದಿದೆ. . .

ಮೇಲೆ ಓದಲಾದ (2) ರಲ್ಲಿ, ಆರೋಪಗಳು ಸಾಬೀತಾಗಿರುವುದರಿಂದ ಶ್ರೀ ಎಸ್.ಟಿ.ಗಡ್ಡದ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಚಿಕ್ಕೋಣತಿ ಗ್ರಾಮ ಪಂಚಾಯತಿ, ಹಿರೆಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಗೆ ಪಾವತಿಸಲಾಗುವ ಪಿಂಚಣಿ ಹಾಗೂ ಇತರೆ ಭತ್ಯೆಗಳಿಂದ ದುರುಪಯೋಗದ ಮೊತ್ತ ರೂ.1,44,000/- ಸರ್ಕಾರಕ್ಕೆ ಮರುಜಮೆ ಮಾಡುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ನಿಯಮಾನುಸಾರ ಆರೋಪಿತ ನೌಕರರಿಗೆ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು ಈ ನೋಟಿಸಿಗೆ ಸದರಿ ನೌಕರರು ಮೇಲೆ ಓದಲಾದ (4) ರಲ್ಲಿ ಸದರಿ ನೌಕರರು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಸರ್ಕಾರವು ಪರಿಶೀಲಿಸಿ, ಆಪಾದಿತರು ಎರಡನೇ ಕಾರಣ ಕೇಳುವ ನೋಟೀಸಿನಲ್ಲಿ ಎತ್ತಿರುವ ಆಕ್ಷೇಪಣೆಗಳಿಗೆ ಸಂಬಂಧ ಪಟ್ಟಂತೆ ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ ಹಾಗೂ ಸದರಿ ನೌಕರರುಗಳ ವಿರುದ್ಧದ ಆರೋಪವು ಸಾಬೀತಾಗಿರುವುದೆಂದು ನಿರ್ಣಯಿಸಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿದೆ. ಆದುದರಿಂದ ಆಪಾದಿತರ ಆಕ್ಷೇಪಣೆಗಳು ಸಮಂಜಸವಾಗಿ ಇರುವುದಿಲ್ಲವಾದ್ದರಿಂದ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಂತೆ ಸದರಿ ನೌಕರರುಗಳಿಗೆ ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿನ ಶಿಫಾರಸ್ಸಿನಂತೆ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 379 ಗ್ರಾಪಂಕಾ 2016, ಬೆಂಗಳೂರು, ದಿನಾಂಕ: 19.10.2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಬಿ) ರನ್ವಯ ಶ್ರೀ ಎಸ್.ಟಿ.ಗಡ್ಡದ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಚಿಕ್ಕೋಣತಿ ಗ್ರಾಮ ಪಂಚಾಯತಿ, ಹಿರೆಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಗೆ ಪಾವತಿಸಲಾಗುವ ಪಿಂಚಣಿ ಹಾಗೂ ಇತರೆ ಭತ್ಯೆಗಳಿಂದ ದುರುಪಯೋಗದ ಮೊತ್ತ ರೂ.1,44,000/- ಸರ್ಕಾರಕ್ಕೆ ಮರುಜಮೆ ಮಾಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ<br>
ಮತ್ತು ಅವರ ಹೆಸರಿನಲ್ಲಿ,

25/X/17

(ಮುಬಾರಕ್ ಅಹ್ಮದ್)<br>
ಉಪನಿರ್ದೇಶಕರು ಹಾಗೂ ಪದನಿಮಿತ್ತ<br>
ಸರ್ಕಾರದ ಅಧೀನ ಕಾರ್ಯದರ್ಶಿ,<br>
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾ ಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಹಾವೇರಿ ಜಿಲ್ಲಾ ಪಂಚಾಯತಿ, ಹಾವೇರಿ.
5) ಕಾರ್ಯನಿರ್ವಾಹಕ ಅಧಿಕಾರಿ, ಹಿರೇಕೆರೂರು ತಾಲ್ಲೂಕು ಪಂಚಾಯತಿ, ಹಿರೇಕೆರೂರು, ಹಾವೇರಿ ಜಿಲ್ಲೆ. (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
6) ಶ್ರೀ ಎಸ್.ಟಿ.ಗಡ್ಡದ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಚಿಕ್ಕೋಣತಿ ಗ್ರಾಮ ಪಂಚಾಯತಿ, ಹಿರೆಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ.
7) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.